ಏನು ಗೊತ್ತೆ? ನಾನು ಮತ್ತು ನಿನ್ನ ತಾಯಿ ಈ ರೀತಿಯ ಜನರಿಂದ ಹೊರತಾಗಿದ್ದೇವೆ ಎನ್ನುವುದನ್ನು.

ಯಾರು ನಿನ್ನಲ್ಲಿ ಒಳ್ಳೆಯತನದಿಂದ ಕೂಡಿದ್ದು, ಸ್ನೇಹದಿಂದ ಇದ್ದಾರೋ, ಅವರೆಲ್ಲರ ಸ್ನೇಹವನ್ನೂ ಅತ್ಯಂತ ಕಾಳಜಿಯಿಂದ ಕಾಪಾಡಿಕೊ. ಅವರಿಗೆ ನಿನ್ನ ಕೃತಜ್ಞತೆಗಳನ್ನು ಸಮರ್ಪಿಸು.

ಅಲ್ಲದೆ ಕೆಲವರ ಸ್ನೇಹದ ವಿಧಾನದ ಬಗ್ಗೆ ಎಚ್ಚರದಿಂದಿರು. ಏಕೆಂದರೆ ಅಂಥವರ ಸ್ನೇಹದಲ್ಲಿ ಏನಾದರೂ ಒಂದು ದುರುದ್ದೇಶವಿರಬಹುದು. ಇನ್ನೂ ಬಿಡಿಸಿ ಹೇಳುವುದಾದರೆ, ನಿನ್ನ ಬಳಿ ಯಾರೋ ಒಬ್ಬ ಬಹಳ ಒಳ್ಳೆಯವನಾಗಿದ್ದಾಕ್ಷಣ, ಆತ ನಿನ್ನನ್ನು ನಿಜವಾಗಿಯೂ ಇಷ್ಟಪಡುತ್ತಾನೆ ಎಂದೇನೂ ಅಲ್ಲ. ಈ ವಿಷಯದಲ್ಲಿ ನೀನು ಬಹಳ ಎಚ್ಚರಿಕೆಯಿಂದ ಹೆಜ್ಜೆ ಹಾಕಬೇಕಾಗುತ್ತದೆ. ಹಾಗೆಯೇ ಈ ವಿಷಯದಲ್ಲಿ ಆತುರದ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಒಳ್ಳೆಯದಲ್ಲ.

೨. ನಾನಾಗಲಿ ನೀನಾಗಲಿ, ಯಾರೂ ಕೂಡ ಈ ಜಗತ್ತಿಗೆ ಅನಿವಾರ್ಯವಲ್ಲ. ಪ್ರಪಂಚದಲ್ಲಿ ನಿನ್ನ ಒಡೆತನದಲ್ಲಿರುವುದು ಯಾವುದೂ ಇಲ್ಲ. ಈ ಸತ್ಯವನ್ನು ನೀನು ಅರಿತಿದ್ದೇ ಆದರೆ, ನಿನ್ನ ಜೀವನದ ಹಾದಿ ಸುಗಮವಾಗುವುದು. ನಿನ್ನ ಸುತ್ತಲಿನ ಜನರು ಅಥವಾ ಪ್ರೀತಿಪಾತ್ರರನ್ನು ನೀನು ಕಳೆದುಕೊಂಡಾಗ, ಅದನ್ನು ಮನಸ್ಸಿಗೆ ತುಂಬಾ ಹಚ್ಚಿಕೊಳ್ಳದಿರಲು ಸಾಧ್ಯವಾಗುವುದು. ಹಾಗೆಯೇ ನಿನ್ನ ಮಾನಸಿಕ ದೃಢತೆ ಕೂಡ ಹೆಚ್ಚಾಗುವುದು.

೩. ಈ ಜೀವನ ಕ್ಷಣಿಕ. ನಿನ್ನ ಜೀವನದ ಇಂದಿನ ದಿನ ವನ್ನು ವ್ಯರ್ಥವಾಗಿ ಕಳೆದರೆ, ನಿನ್ನ ಇಡೀ ಜೀವನವನ್ನು ಕಳೆದುಕೊಂಡಂತೆ. ಜೀವನವನ್ನು ಅತ್ಯಮೂಲ್ಯವೆಂದು ಒಂದು ನಿಧಿಯ ಹಾಗೆ ಸಂರಕ್ಷಿಸಿದರೆ, ನೀನು ಇನ್ನೂ ಹೆಚ್ಚು ಸುಖ ದಿಂದ ಇರಬಹುದು.

೪. ಪ್ರೀತಿ ಎಂಬುದು ನಶ್ವರ. ಅದು ಮಾನವೀಯ ಸಂಬಂಧ ವನ್ನು ಕಲ್ಪಿಸಲು ಬೇಕಾದ ಒಂದು ಕೊಂಡಿಯಷ್ಟೆ. ಈ ಭಾವನೆ ಸಮಯ ಕಳೆದಂತೆ ಮಾಸುವುದು. ಇದಲ್ಲದೆ ಪ್ರೀತಿಯೆನ್ನುವುದು ಒಬ್ಬನ ಮನಃಸ್ಥಿತಿಯ ಮೇಲೆ ಅವಲಂಬಿತವಾಗಿರುತ್ತದೆ.

ನಿನಗೆ ಪ್ರೀತಿಪಾತ್ರರಾದವರು ನಿನ್ನನ್ನು ತೊರೆದರೆ ಸಹನೆ ಯಿಂದಿರು. ಸಮಯವೆನ್ನುವುದು ಎಲ್ಲವನ್ನೂ ತೊಳೆದು ಬಿಡುತ್ತದೆ. ನಿನ್ನ ನೋವು, ಬೇಸರ, ದುಗುಡ – ಇದಾವುದಕ್ಕೂ ಉತ್ಪ್ರೇಕ್ಷೆ ಪಡಬೇಡ. ಇದು ಸೌಂದರ್ಯಕ್ಕೂ ಪ್ರೇಮಕ್ಕೂ ಅನ್ವಯಿಸುತ್ತದೆ.

೫. ಬಹಳಷ್ಟು ಯಶಸ್ವಿ ಉದ್ಯಮಿಗಳು ಹಾಗೂ ಪ್ರಖ್ಯಾತ ವ್ಯಕ್ತಿಗಳು ಒಳ್ಳೆಯ ಶಾಲಾಶಿಕ್ಷಣವನ್ನು ಪಡೆದಿರುವುದಿಲ್ಲ. ಹಾಗೆಂದಾಕ್ಷಣ ನೀನು ಪರಿಶ್ರಮಪಟ್ಟು ಓದದಿದ್ದರೂ, ಅಭ್ಯಾಸ ಮಾಡದಿದ್ದರೂ, ಯಶಸ್ಸು ಕಾಣಬಹುದು ಎಂದು ಭಾವಿಸ ಬೇಡ. ಅಂತಹ ವಿಚಾರದಲ್ಲಿ ಅರ್ಥವಿಲ್ಲ.

೬. ನೀನು ಎಷ್ಟು ಜ್ಞಾನವನ್ನು ಸಂಪಾದಿಸುತ್ತೀಯೋ, ಅದೇ ನಿನ್ನ ಜೀವನದಲ್ಲಿ ಪ್ರಬಲ ಅಸ್ತ್ರವಾಗಿ ಪರಿಣಮಿಸುವುದು. ನೀನು ಯಾವುದಾದರೂ ಒಂದು ವಿಷಯದಲ್ಲಿ ಹೊಂದುವ ಪರಿಣತಿಯೇ ನಿನ್ನನ್ನು ಒಂದು ನೆಲೆಗೆ ಕೊಂಡೊಯ್ಯುತ್ತದೆ. ಯಾರು ಬೇಕಾದರೂ ಚಿಂದಿಬಟ್ಟೆಯಿಂದ ಐಶಾರಾಮದ ಜೀವನದೆಡೆಗೆ ಸಾಗಬಹುದು. ಆದರೆ ಎಲ್ಲರೂ ಚಿಂದಿಬಟ್ಟೆ ಯಿಂದಲೇ ಪ್ರಾರಂಭಿಸಬೇಕು ಎನ್ನುವುದನ್ನು ನೆನಪಿನಲ್ಲಿಟ್ಟುಕೋ. ಏಕೆಂದರೆ, ಸಾವಿರ ಮೈಲಿ ನಡೆಯಬೇಕಾದರೂ ಅದನ್ನು ಮೊದಲ ಹೆಜ್ಜೆಯಿಂದಲೇ ಪ್ರಾರಂಭಿಸಬೇಕು.

ನನಗೆ ವಯಸ್ಸಾದಾಗ ನೀನು ನನಗೆ ಆಸರೆಯಾಗಿರಬೇಕೆಂದು ನಾನು ನಿರೀಕ್ಷಿಸುವುದಿಲ್ಲ. ಅಂತೆಯೇ ನಿನ್ನ ಜೀವನಪೂರ್ತಿ ನಿನಗೆ ಆರ್ಥಿಕ ಸಹಾಯವನ್ನು ಮಾಡಲೂ ನನಗೆ ಸಾಧ್ಯವಿಲ್ಲ. ನೀನು ವಯಸ್ಕನಾದ ನಂತರ ನನ್ನ ಜವಾಬ್ದಾರಿಗಳು ಮುಗಿ ದಂತೆಯೇ. ಮುಂದೆ ನೀನು ಕೈಗೊಳ್ಳುವ ನಿರ್ಧಾರಗಳು ನಿನಗೇ ಬಿಟ್ಟದ್ದು.

ನೀನು ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣ ಮಾಡು ತ್ತೀಯೋ ಅಥವಾ ದುಬಾರಿ ಕಾರಿನಲ್ಲಿ ಓಡಾಡುತ್ತೀಯೋ – ಅದು ನಿನ್ನ ಆಯ್ಕೆಗೆ ಬಿಟ್ಟದ್ದು. ಬಡವನಾಗಿಯೇ ಇರುವುದು ಅಥವಾ ಶ್ರೀಮಂತನಾಗಿರುವುದು, ಈ ಆಯ್ಕೆಯೂ ನಿನ್ನದೇ.

ನೀನು ಹೇಳುವ ಮಾತುಗಳನ್ನು ನಾನು ಗೌರವಿಸುತ್ತೇನೆ. ಅವನ್ನು ಪ್ರಬುದ್ಧತೆಯ ಸಂಕೇತ ಎಂದು ತಿಳಿದುಕೊಳ್ಳುತ್ತೇನೆ. ಇದು ಸಹಜವಾದುದೇ. ಆದರೆ ಬೇರೆಯವರು ನಿನ್ನನ್ನು ಅದೇ ರೀತಿ ಗೌರವಿಸುತ್ತಾರೆ ಎಂದು ನೀನು ನಿರೀಕ್ಷಿಸುವುದು ತಪ್ಪಾಗುತ್ತದೆ. ನೀನು ಇತರರೊಡನೆ ಬಹಳ ಒಳ್ಳೆಯತನದಿಂದ ವರ್ತಿಸುತ್ತಿರಬಹುದು. ಆದರೆ ಜನರು ನಿನ್ನೊಡನೆ ಒಳ್ಳೆಯತನ ದಿಂದಿರುವುದು ಅವರಿಗೆ ಬಿಟ್ಟದ್ದು. ಈ ಸತ್ಯವನ್ನು ನೀನು ಅರಿಯದಿದ್ದರೆ, ಹಲವಾರು ತೊಂದರೆಗಳಿಗೆ ಸಿಲುಕುವ ಸಂಭವಗಳಿವೆ.

ನಾನು ಈ ಹಿಂದೆ ಹಲವಾರು ಸಲ ಲಾಟರಿ ಟಿಕೆಟ್‌ಗಳನ್ನು ಕೊಂಡುಕೊಂಡಿದ್ದೇನೆ. (*ಅಂದರೆ, ಹಲವಾರು ಸಂದರ್ಭಗಳಲ್ಲಿ ವಿವಿಧ ರೀತಿಯ ಆಯ್ಕೆಗಳನ್ನು ಆಯ್ದುಕೊಂಡಿದ್ದೇನೆ – ಸಂ.*) ಆದರೆ ಬಹುಮಾನ ಗೆಲ್ಲುವುದರಲ್ಲಿ ಅನೇಕ ವೇಳೆ ವಿಫಲನಾಗಿದ್ದೇನೆ. ಇದರಿಂದ ಏನು ತಿಳಿದುಕೊಳ್ಳಬೇಕು? ಶ್ರೀಮಂತನಾಗಬೇಕಾದರೆ ಕಠಿಣ ಪರಿಶ್ರಮದಿಂದ ಮಾತ್ರವೇ ಸಾಧ್ಯ ಎಂದು. ಏಕೆಂದರೆ, **ಯಾವ ಊಟವೂ ಉಚಿತವಾಗಿ ದೊರೆಯುವುದಿಲ್ಲ, ಯಾವುದೂ ಉಚಿತವಲ್ಲ.**

ನನಗೆ ತಿಳಿಯದು, ಎಲ್ಲಿಯವರೆಗೆ ನಾನು ನಿನ್ನ ಜೊತೆ ಯಲ್ಲಿರುತ್ತೇನೆಂದು. ಆದ್ದರಿಂದ ಅತ್ಯಂತ ಕಾಳಜಿಯಿಂದ ಸಮಯವನ್ನು ಕಾಪಾಡೋಣ. ಮುಂದಿನ ಜನ್ಮವೇನಾದರೂ ಇದ್ದರೆ, ಹೀಗೆಯೇ ಜೊತೆಯಲ್ಲಿಯೇ ಬಾಳೋಣ.

**ನಿನ್ನ ಪ್ರೀತಿಯ ತಂದೆ**